**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪ್ರ.ಸ./2017–18 / 353-16

ದಿನಾಂಕ: 30.10.2018

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ನಲವತ್ತೆಂಟನೆಯ** ಸಭೆಯು ದಿನಾಂಕ: **27.10.2018ರ ಶನಿವಾರ ಪೂರ್ವಾಹ್ನ 11.00 ಗಂಟೆಗೆ** ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

Sulpay
**ಕುಲಸಚಿವರು**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
**ಬೆಂಗಳೂರು – 560018.**

ಇವರಿಗೆ,

1. **ಶ್ರೀಮತಿ ಸುಜಾತ ಗೌಡ,** # 30, 7ನೇ ಹಂತ, 2ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, ಮೈಲಸಂದ್ರ, ಕೆಂಗೇರಿ, ಬೆಂಗಳೂರು – 560059.
2. **ಶ್ರೀ ಶಿವಕುಮಾರ್ ಎನ್.,** # 109, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಪಾಂಡುರಂಗ ಬಡಾವಣೆ, ಅರಕೆರೆ ಗೇಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076.
3. **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು–560001
4. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು–560001
5. **ಸರ್ಕಾರದ ಕಾರ್ಯದರ್ಶಿ,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001
6. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಪ್ರಸನ್ನಕುಮಾರ್ ಬ್ಲಾಕ್, ಅರಮನೆ ರಸ್ತೆ, ಬೆಂಗಳೂರು–09,
7. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು–570001.
8. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
9. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001
10. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ ಬೆಂಗಳೂರು–560001
11. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012
12. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009
13. **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

ಪ್ರತಿಗಳು:

1. **ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು,** ರಾಜಭವನ, ಬೆಂಗಳೂರು – 560001
2. **ಮಾನ್ಯ ಕುಲಪತಿಯವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ
4. ರಕ್ಷತಾ ಪ್ರತಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## 27.10.2018ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 48ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 48ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಅಕ್ಟೋಬರ್ 27, 2018ರ ಶನಿವಾರ ಪೂರ್ವಾಹ್ನ 11.30** ಗಂಟೆಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | |
|---|---|
| ೧. **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. **ಶ್ರೀಮತಿ ಸುಜಾತ ಗೌಡ,** ಬೆಂಗಳೂರು | ಸದಸ್ಯರು |
| ೩. **ಶ್ರೀ ಶಿವಕುಮಾರ್ ಎನ್.,** ಬೆಂಗಳೂರು | ಸದಸ್ಯರು |
| ೪. **ಶ್ರೀ ಸುಬ್ರಹ್ಮಣ್ಯ ಕೆ.ಎಲ್,** ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೫. **ನಿರ್ದೇಶಕರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001 | |
| – ಪರವಾಗಿ **ಶ್ರೀಮತಿ ಶಮೀಮ್ ತಾಜ್ ಎಚ್.ಎ,** ಉಪ ನಿರ್ದೇಶಕರು | ಸದಸ್ಯರು |
| ೬. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| – ಪರವಾಗಿ **ಶ್ರೀಮತಿ ಕಾವ್ಯಶ್ರೀ,** ಸಹಾಯಕ ನಿರ್ದೇಶಕರು | ಸದಸ್ಯರು |
| ೭. **ಶ್ರೀಮತಿ ಎಂ. ಶಿಲ್ಪ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | |
|---|---|
| ೧. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೨. **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೩. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೪. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೭. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೮. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೯. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | **ಪ್ರಶಾಸನ ಸಮಿತಿ 47ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 47ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 07.09.2018ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಅನುಮೋದನೆ ನೀಡಿತು** |
| ವಿಷಯ 02 | **ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಅಂಬೇಡ್ಕರ್ ಕುರಿತ ವಿಚಾರ ಸಂಕಿರಣ ನಡೆಸುವ ಬಗೆಗೆ.**<br>ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ(ಎನ್.ಎಸ್.ಎಸ್) ಕೋಶವು ಡಾ.ಬಿ.ಆರ್ ಅಂಬೇಡ್ಕರ್ ರವರ ತತ್ತ್ವಗಳು ಹಾಗೂ ಇತರ ಮಹಾಪುರುಷರ ತತ್ತ್ವಗಳ ತೌಲನಿಕ ಅಧ್ಯಯನ ಮಾಡುವ ದೃಷ್ಟಿಯಿಂದ 2018ರ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಿನಲ್ಲಿ ವಿಚಾರಸಂಕಿರಣವನ್ನು ನಡೆಸಲು ಸಿದ್ಧತೆ ಮಾಡಿಕೊಂಡಿದೆ. ಈ |

ವಿಚಾರ ಸಂಕಿರಣಕ್ಕೆ ರಾಜ್ಯ ಸರಕಾರವು 2.00 ಲಕ್ಷ ರೂಗಳನ್ನು ನೀಡಿದೆ. ಇದನ್ನು ಪ್ರಶಾಸನ ಸಭೆಯ ಗಮನಕ್ಕೆ ತರಲಾಗಿದೆ.

**ನಿರ್ಣಯ**

**ನವೆಂಬರ್ ತಿಂಗಳ 2 ಮತ್ತು 3ನೇ ತಾರೀಖುಗಳಂದು ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಅಂಬೇಡ್ಕರ್ ಕುರಿತ ವಿಚಾರ ಸಂಕಿರಣ ನಡೆಸಲು ಸಭೆಯು ಅನುಮೋದನೆ ನೀಡಿತು**

**ವಿಷಯ 03**

**ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ವಿದೇಶಪ್ರಯಾಣ ಭತ್ಯೆ ನೀಡುವ ಬಗೆಗೆ.**

47ನೇ ಪ್ರಶಾಸನ ಸಮಿತಿಯ ನಿರ್ಣಯದಂತೆ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ವಿದೇಶಪ್ರಯಾಣ ಭತ್ಯೆ ನೀಡುವ ಬಗ್ಗೆ ನಿಯಮವನ್ನು ರಚಿಸಲಾಗಿದೆ. ವಿದೇಶಕ್ಕೆ ತೆರಳುವ ಬೋಧಕ ವರ್ಗದವರಿಗೆ 3 ವರ್ಷಗಳಿಗೊಮ್ಮೆ 50,000 ರೂಗಳನ್ನು ವಿಶ್ವವಿದ್ಯಾಲಯವು ಮಂಜೂರು ಮಾಡಬಹುದು. ಇದು ಆಹ್ವಾನಿತರಿಗೆ ಮತ್ತು ಪತ್ರಿಕೆ ಮಂಡಿಸುವವರಿಗೆ ಅನ್ವಯವಾಗುತ್ತದೆ. ಏಕಕಾಲದಲ್ಲಿ ಐವರು ಬೋಧಕ ಸಿಬ್ಬಂದಿಗಳಿಗೆ ಈ ಅವಕಾಶ ಕಲ್ಪಿಸಬಹುದಾಗಿದೆ. ಇದನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ**

**ಸಭೆಯು ಒಪ್ಪಿಗೆ ನೀಡಿತು**

**ವಿಷಯ 04**

**ವಿಶ್ವವಿದ್ಯಾಲಯದ ಆವರಣದಲ್ಲಿರುವ ವಿದ್ಯಾರ್ಥಿನಿಲಯವನ್ನು ಕೆಡವಿ ಹೊಸ ಕಟ್ಟಡ ನಿರ್ಮಿಸುವ ಬಗೆಗೆ.**

ಚಾಮರಾಜೇಂದ್ರ ಕಾಲೇಜು ಕಟ್ಟಡದ ಹಿಂಭಾಗದಲ್ಲಿ ವಿದ್ಯಾರ್ಥಿಗಳ ವಾಸಕ್ಕಾಗಿ ಉಪಯೋಗಿಸಲಾಗುತ್ತಿದ್ದ 40ಕ್ಕೂ ಹೆಚ್ಚು ವರ್ಷ ಹಳೆಯದಾದ ಕಟ್ಟಡವಿದೆ. ಈ ಕಟ್ಟಡವು ಶಿಥಿಲಾವಸ್ಥೆಯಲ್ಲಿದ್ದು, ಈ ಕಟ್ಟಡದ ಕುರಿತಾದ ಯಾವುದೇ ಅಧಿಕೃತ ದಾಖಲೆಗಳು ಇರುವುದಿಲ್ಲ. ಆದ್ದರಿಂದ ಶಿಥಿಲವಾಗಿರುವ ಈ ಕಟ್ಟಡವನ್ನು ಕೆಡವಿ ಈಗ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನವನ್ನು ಬಳಸಿಕೊಂಡು ವಿದ್ಯಾರ್ಥಿಗಳ ಒಳಿತಿಗೋಸ್ಕರ ಮೂರು ಅಂತಸ್ತಿನ ಹೊಸ ಕಟ್ಟಡವನ್ನು ನಿರ್ಮಿಸಬಹುದಾಗಿದ್ದು ಸಭೆಯ ಅನುಮತಿ ಕೋರಿದೆ.

**ನಿರ್ಣಯ**

**ವಿಶ್ವವಿದ್ಯಾಲಯದ ಆವರಣದಲ್ಲಿರುವ ವಿದ್ಯಾರ್ಥಿನಿಲಯವನ್ನು ಕೆಡವಿ ಹೊಸ ಕಟ್ಟಡ ನಿರ್ಮಿಸಲು ಸಭೆಯು ಒಮ್ಮತದಿಂದ ಒಪ್ಪಿಗೆ ನೀಡಿತು**

**ವಿಷಯ 05**

**ರಾಜ್ಯಮಟ್ಟದ ಸ್ಪರ್ಧೆಗಳನ್ನು ಸಂಸ್ಕೃತ ಸಂಶೋಧನಾ ಸಂಸತ್ ಮೇಲುಕೋಟೆ – ಇಲ್ಲಿ ನಡೆಸುವ ಬಗೆಗೆ.**

ಪ್ರತಿ ವರ್ಷದಂತೆಯೇ 2018–19ನೇ ಸಾಲಿನಲ್ಲಿ ರಾಜ್ಯಮಟ್ಟದ ಪ್ರತಿಯೋಗಿತಾ ಮತ್ತು ಶಲಾಕಾ ಸ್ಪರ್ಧೆಗಳನ್ನು ನಡೆಸಲು ರಾಷ್ಟ್ರೀಯ ಸಂಸ್ಕೃತ ಸಂಸ್ಥಾನವು ಪತ್ರಿಸಿರುತ್ತದೆ. ಇದಕ್ಕೆ ಸುಮಾರು 6.00 ಲಕ್ಷ ರೂಗಳನ್ನು ಅಂದಾಜಿಸಲಾಗಿದೆ. ಈ ಸ್ಪರ್ಧೆಗಳನ್ನು ಈ ಸಾಲಿನಲ್ಲಿ ಮೇಲುಕೋಟೆಯಲ್ಲಿರುವ ಸಂಸ್ಕೃತ ಸಂಶೋಧನಾ ಸಂಸತ್ ಆವರಣದಲ್ಲಿ **ಸಂಸ್ಕೃತ ಸಂಶೋಧನಾ ಸಂಸತ್ ಮೇಲುಕೋಟೆ ಇವರ ಸಹಯೋಗದೊಂದಿಗೆ** ನಡೆಸಬಹುದಾಗಿದ್ದು ಸಭೆಯ ಅನುಮತಿ ಕೋರಿದೆ.

**ನಿರ್ಣಯ**

**ರಾಜ್ಯಮಟ್ಟದ ಸ್ಪರ್ಧೆಗಳನ್ನು ಸಂಸ್ಕೃತ ಸಂಶೋಧನಾ ಸಂಸತ್ ಮೇಲುಕೋಟೆ ಇಲ್ಲಿ ನಡೆಸಲು ಸಭೆಯು ಒಪ್ಪಿಗೆ ಸೂಚಿಸಿತು.**

**ವಿಷಯ 06**

**ಶ್ರೀಮತಿ ಭಾಗ್ಯ ಇವರಿಗೆ ಅನುಕಂಪದ ಆಧಾರದ ಮೇಲೆ "ಡಿ" ಗ್ರೂಪ್ ಹುದ್ದೆ ನೀಡುವ ಬಗೆಗೆ.**

ಸಂಸ್ಕೃತ ಸಂಶೋಧನಾ ಸಂಸತ್ ಮೇಲುಕೋಟೆ – ಇಲ್ಲಿ ಡಿ ಗ್ರೂಪ್ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಚೆಲುವಯ್ಯ ಎಂಬುವವರು 01 ಜನವರಿ 2018ರಲ್ಲಿ ನಿಧನರಾಗಿದ್ದು ಇವರ ಪತ್ನಿಯಾದ ಶ್ರೀಮತಿ ಭಾಗ್ಯ ಇವರಿಗೆ ಅನುಕಂಪದ ಆಧಾರದ ಮೇಲೆ "ಡಿ" ಗ್ರೂಪ್ ಹುದ್ದೆ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ**

**ಸಂಸ್ಕೃತ ಸಂಶೋಧನಾ ಸಂಸತ್, ಮೇಲುಕೋಟೆ – ಈ ಸಂಸ್ಥೆಯಲ್ಲಿ ಶ್ರೀಮತಿ ಭಾಗ್ಯ ಇವರಿಗೆ ಅನುಕಂಪದ ಆಧಾರದ ಮೇಲೆ "ಡಿ" ಗ್ರೂಪ್ ಹುದ್ದೆ ನೀಡಲು ಸರ್ಕಾರಿ ನಿಯಮಾನುಸಾರ ವಿಶ್ವವಿದ್ಯಾಲಯವೇ ಕ್ರಮ ಕೈಗೊಳ್ಳಬಹುದೆಂದು ಸಭೆಯು ನಿರ್ಣಯಿಸಿತು.**

**ವಿಷಯ 07**

**ಪಿಎಚ್.ಡಿ–ವಿದ್ಯಾವಾರಿಧಿ ತರಗತಿಗಳಲ್ಲಿ ಪ್ರವೇಶಾತಿ ಪಡೆಯುವ ವಿದೇಶೀ ವಿದ್ಯಾರ್ಥಿಗಳಿಗೆ ಶುಲ್ಕ ನಿಗದಿ ಮಾಡುವ ಬಗೆಗೆ ಮತ್ತು ಪಿಎಚ್.ಡಿ–ವಿದ್ಯಾವಾರಿಧಿ ತರಗತಿಗಳ ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕ ಹೆಚ್ಚಿಸುವ ಬಗೆಗೆ.**

ಪಿಎಚ್.ಡಿ–ವಿದ್ಯಾವಾರಿಧಿ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಶುಲ್ಕವನ್ನು ನಿಗದಿಪಡಿಸಲಾಗಿದೆ. ಸರ್ಕಾರದ ನಿಯಮಗಳಂತೆ ಮೀಸಲಾತಿ ಸೌಲಭ್ಯ ಹೊಂದಿರುವ ಅಭ್ಯರ್ಥಿಗಳಿಗೆ 50% ರಷ್ಟು ಶುಲ್ಕ ವಿನಾಯಿತಿ ಇರುತ್ತದೆ.

| ಕ್ರ.ಸಂ. | ಶುಲ್ಕವಿವರ | ಮೊತ್ತ |
|---|---|---|
| 01 | ಅರ್ಜಿ ಮತ್ತು ಪ್ರವೇಶ ಪರೀಕ್ಷಾ ಶುಲ್ಕ | **500.00** |
| 02 | ಅರ್ಜಿ ಶುಲ್ಕ (ಪ್ರವೇಶ ಪರೀಕ್ಷೆ ವಿನಾಯಿತಿ ಇರುವವರಿಗೆ) | **300.00** |
| 03 | ನೋಂದಣಿ ಶುಲ್ಕ | **5000.00** |
| 04 | ಬೋಧನಾ (ಕೋರ್ಸ್‌ವರ್ಕ್) ಶುಲ್ಕ | **3000.00** |

| | | |
|---|---|---|
| 05 | ಕೋರ್ಸ್‌ವರ್ಕ್ ಪರೀಕ್ಷಾ ಶುಲ್ಕ | 1000.00 |
| 06 | ಪುನರ್ ಮೌಲ್ಯಮಾಪನ ಶುಲ್ಕ (ಪ್ರತಿ ಪತ್ರಿಕೆಗೆ) | 1000.00 |
| 07 | ಕೋರ್ಸ್‌ವರ್ಕ್ ನಂತರ ವಾರ್ಷಿಕ ಶುಲ್ಕ (ಪ್ರತಿ ವರ್ಷ) | 5000.00 |
| 08 | ಗ್ರಂಥಾಲಯ ಶುಲ್ಕ (ಪ್ರತಿ ವರ್ಷ) | 500.00 |
| 09 | ಶೋಧ ಪ್ರಬಂಧ ಸಮರ್ಪಣೆ & ಪರೀಕ್ಷಾ ಶುಲ್ಕ | 8000.00 |
| 10 | ಘಟಿಕೋತ್ಸವ ಪ್ರಮಾಣಪತ್ರ (ಸಂಸ್ಕೃತ ಮತ್ತು ಇಂಗ್ಲಿಷ್) | 1000.00 |
| 11 | ಪ್ರಬಂಧ ಪ್ರಕಟಣೆಗೆ ಅನುಮತಿ ಶುಲ್ಕ | 2500.00 |
| | ಒಟ್ಟು | **27,800.00** |

ವಿದೇಶೀ ವಿದ್ಯಾರ್ಥಿಗಳು ಪ್ರವೇಶವನ್ನು ಬಯಸಿ ಬರುತ್ತಿರುವ ಹಿನ್ನೆಲೆಯಲ್ಲಿ ವಿದೇಶೀ ವಿದ್ಯಾರ್ಥಿಗಳಿಗೆ ನಿಗದಿಪಡಿಸಬಹುದಾದ ಮೊತ್ತವನ್ನು ಕೋರಿ ಸಭೆಯಲ್ಲಿ ಮಂಡಿಸಿದೆ. ಪಿಎಚ್.ಡಿ–ವಿದ್ಯಾವಾರಿಧಿ ತರಗತಿಗಳ ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕ ಹೆಚ್ಚಿಸಬಹುದಾಗಿದ್ದು ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ.

| | |
|---|---|
| ನಿರ್ಣಯ | **ಮೈಸೂರು ವಿಶ್ವವಿದ್ಯಾಲಯ ಮುಂತಾದ ಇತರೆ ವಿಶ್ವವಿದ್ಯಾಲಯಗಳಲ್ಲಿ ವಿದೇಶಿ ವಿದ್ಯಾರ್ಥಿಗಳ ಪಿಎಚ್.ಡಿ ಪದವಿಗೆ ನಿಗದಿಪಡಿಸಿದ ಶುಲ್ಕವನ್ನು ಗಮನಿಸಿ ಶುಲ್ಕವನ್ನು ನಿಗದಿಪಡಿಸಬಹುದೆಂದು ಸಭೆಯು ಸೂಚಿಸಿತು.** |
| ವಿಷಯ 08 | **ಪಿಎಚ್.ಡಿ ಮೌಲ್ಯಮಾಪಕರಿಗೆ ಪ್ರಯಾಣ ಭತ್ಯೆ ನೀಡುವ ಬಗೆಗೆ.**<br>ಪಿಎಚ್.ಡಿ ಮೌಲ್ಯಮಾಪಕರಿಗೆ ಪ್ರತಿ ಕಿ.ಮೀಗೆ 8. ರೂಗಳಂತೆ 450ಕೀ.ಮೀ ದೂರದ ಒಳಗೆ ಪ್ರಯಾಣ ಮಾಡಿದಲ್ಲಿ ಟ್ಯಾಕ್ಸಿ ಬಾಡಿಗೆಯನ್ನು ಪ್ರಯಾಣ ಭತ್ಯೆಯಾಗಿ ನೀಡಬಹುದಾಗಿದ್ದು ಸಭೆಯ ಅನುಮತಿ ಕೋರಿದೆ. |
| ನಿರ್ಣಯ | **ಸಭೆಯು ಒಪ್ಪಿಗೆ ಸೂಚಿಸಿತು.** |
| ವಿಷಯ 09 | **ಮೊಹಮದ್ ಮುದಾಸೀರ್, "ಡಿ" ಗ್ರೂಪ್ ನೌಕರರು – ಇವರ ಮರು ನೇಮಕಾತಿ ಬಗೆಗೆ.**<br>ಈಗಾಗಲೇ ವಜಾಗೊಂಡಿರುವ ವಿಶ್ವವಿದ್ಯಾಲಯದ "ಡಿ" ಗ್ರೂಪ್ ನೌಕರರಾದ ಮೊಹಮದ್ ಮುದಾಸೀರ್ ರವರು ತಮ್ಮನ್ನು ಮತ್ತೆ ನೇಮಕ ಮಾಡಿಕೊಳ್ಳುವಂತೆ ವಿನಂತಿ ಮಾಡಿಕೊಂಡಿರುತ್ತಾರೆ. ಇವರ ಮರು ನೇಮಕಾತಿ ಕುರಿತು ಪ್ರಶಾಸನ ಸಭೆಯ ಅಭಿಪ್ರಾಯಕ್ಕಾಗಿ ಕೋರಿದೆ. |
| ನಿರ್ಣಯ | **ಕೆ.ಸಿ.ಎಸ್.ಆರ್ ನಿಯಮಾನುಸಾರ ಇವರು ತಮ್ಮ ಖಾಯಂ ಪೂರ್ವ ಸೇವಾವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕಾರಣವಿಲ್ಲದೇ ದೀರ್ಘಾವಧಿ ಗೈರುಹಾಜರಾಗಿರುವುದರಿಂದ ನಿಯಮಾನುಸಾರ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪುನರ್ ಪರಿಶೀಲಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಸಭೆ ತೀರ್ಮಾನಿಸಿತು.** |
| ವಿಷಯ 10 | **ಶ್ರೀ ಉದಯ ಹೊಳ್ಳ, ಹಿರಿಯ ನ್ಯಾಯವಾದಿಗಳು ಮತ್ತು ಅಡ್ವೋಕೇಟ್ ಜನರಲ್, ಕರ್ನಾಟಕ ಸರ್ಕಾರ – ಇವರಿಗೆ ಕಾನೂನು ಸಲಹೆಗಾಗಿ ಶುಲ್ಕ ಪಾವತಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಬಗೆಗೆ.**<br>ಧಾರವಾಡದಲ್ಲಿರುವ ಗುರುಕುಲ ಶಿಕ್ಷಣ ಟ್ರಸ್ಟ್ ನ ಸಿ.ಎಲ್.ವೈ ಸಂಸ್ಕೃತ ಕಾಲೇಜು ಮತ್ತು ಪಾಠಶಾಲೆಗಳಿಗೆ ಆಡಳಿತಾಧಿಕಾರಿಗಳನ್ನು ಸರ್ಕಾರವು ನೇಮಕ ಮಾಡಿದ್ದು ಈಗ ಟ್ರಸ್ಟ್‌ನ ಪದಾಧಿಕಾರಿಗಳು ರಾಜಿಯಾಗಿರುವುದರಿಂದ ಆಡಳಿತಾಧಿಕಾರಿಗಳ ಆಡಳಿತವನ್ನು ರದ್ದುಗೊಳಿಸುವ ಸಂಬಂಧ ಕಾನೂನು ಸಲಹೆ ಕೋರಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಶ್ರೀ ಉದಯ ಹೊಳ್ಳ, ಹಿರಿಯ ನ್ಯಾಯವಾದಿಗಳು ಮತ್ತು ಅಡ್ವೋಕೇಟ್ ಜನರಲ್, ಕರ್ನಾಟಕ ಸರ್ಕಾರ – ಇವರಿಗೆ ಶುಲ್ಕ 1.00 ಲಕ್ಷ ರೂಗಳನ್ನು ಪಾವತಿಸಿದೆ. ಇದಕ್ಕೆ ಘಟನೋತ್ತರ ಅನುಮತಿ ನೀಡಲು ಪ್ರಶಾಸನ ಸಮಿತಿಯಲ್ಲಿ ಮಂಡಿಸಿದೆ. |
| ನಿರ್ಣಯ | **ಸಭೆಯು ಒಪ್ಪಿಗೆ ಸೂಚಿಸಿತು.** |
| ವಿಷಯ 11 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದಿಂದ ನಡೆಯುವ 2018–19ನೇ ಸಾಲಿನ ವಲಯ ಮತ್ತು ರಾಜ್ಯ ಮಟ್ಟದ ವಿವಿಧ ಸ್ಪರ್ಧೆಗಳನ್ನು ನಡೆಸಲು ಅಂದಾಜು ವೆಚ್ಚಕ್ಕೆ ಅನುಮತಿ ನೀಡುವ ಬಗೆಗೆ.**<br>ಪ್ರತಿ ವರ್ಷದಂತೆಯೇ 2018–19ನೇ ಶೈಕ್ಷಣಿಕ ವರ್ಷದಲ್ಲಿಯೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ರಾಜ್ಯದ ಎಲ್ಲಾ ವಲಯದ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ವಲಯ ಮತ್ತು ರಾಜ್ಯ ಮಟ್ಟದ ಸ್ಪರ್ಧೆಗಳನ್ನು ನಡೆಸಲು ಸುಮಾರು 3.50 ಲಕ್ಷರೂಗಳನ್ನು ಅಂದಾಜಿಸಲಾಗಿದೆ. ಈ ಮೊತ್ತಕ್ಕೆ ಅನುಮೋದನೆ ಕೋರಿ ಪ್ರಶಾಸನ ಸಮಿತಿಯಲ್ಲಿ ಮಂಡಿಸಿದೆ. |
| ನಿರ್ಣಯ | **ಸಭೆಯು ಒಪ್ಪಿಗೆ ಸೂಚಿಸಿತು.** |
| ವಿಷಯ 12 | **ಇಲಾಖಾ ಮುಖ್ಯಸ್ಥರು ಹಾಗೂ ಇನ್ನಿತರ ಅಧಿಕಾರಿಗಳಿಗೆ ಸಾಮಾನ್ಯ ವಿತ್ತಾಧಿಕಾರವನ್ನು ಪರಿಷ್ಕರಿಸುವ ಬಗ್ಗೆ ಸರ್ಕಾರದ ಆದೇಶವನ್ನು ಜಾರಿಗೊಳಿಸುವ ಬಗೆಗೆ.** |

| | |
|---|---|
| | ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 03ಟಿಎಫ್ ಪಿ 2018 ದಿನಾಂಕ: 14.05.2018 ರಲ್ಲಿ ಇಲಾಖಾ ಮುಖ್ಯಸ್ಥರು ಹಾಗೂ ಇನ್ನಿತರ ಅಧಿಕಾರಿಗಳಿಗೆ ಸಾಮಾನ್ಯ ಆರ್ಥಿಕ ಅಧಿಕಾರಗಳನ್ನು ಪರಿಷ್ಕರಿಸಿ ಆದೇಶಿಸಿದೆ. ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಈ ಆದೇಶ ಅನ್ವಯವಾಗುವುದರಿಂದ ಈ ಆದೇಶವನ್ನು ವಿಶ್ವವಿದ್ಯಾಲಯದಲ್ಲಿ ಜಾರಿಗೊಳಿಸುವ ಬಗೆಗೆ ಅನುಮತಿ ಕೋರಿ ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ಸಭೆಯು ಒಪ್ಪಿಗೆ ಸೂಚಿಸಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು** | |
| ವಿಷಯ 01 | **ವಿಶ್ವವಿದ್ಯಾಲಯದ ಕೋರ್ಸ್ ವರ್ಕ್ ತರಗತಿಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡುವ ಬಗೆಗೆ.**<br>ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದಿಂದ ಮಾನ್ಯತೆ ಪಡೆದಿರುವ ಪೂರ್ಣಪ್ರಜ್ಞ ಸಂಶೋಧನ ಮಂದಿರದಲ್ಲಿ ಪಿಎಚ್. ಡಿ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 6 ತಿಂಗಳ ಕೋರ್ಸ್ ವರ್ಕ್ ಕಡ್ಡಾಯವಾಗಿರುವ ಹಿನ್ನೆಲೆಯಲ್ಲಿ ಅಲಹಾಬಾದ್ ಪರಿಸರದಲ್ಲಿ ಈ 6 ತಿಂಗಳ ಕೋರ್ಸ್ ವರ್ಕ್ ಪಡೆಯಲು ಅನುಕೂಲತೆ ಇಲ್ಲದಿರುವ ವಿದ್ಯಾರ್ಥಿಗಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನಡೆಸುವ ಕೋರ್ಸ್ ವರ್ಕ್ ನಲ್ಲಿ ಭಾಗವಹಿಸಲು ಅನುಮತಿ ಕೋರಿದೆ. |
| ನಿರ್ಣಯ | **ಸಭೆಯು ಒಪ್ಪಿಗೆ ಸೂಚಿಸಿತು.** |
| ವಿಷಯ 02 | **ಯು.ಜಿ.ಸಿ ವೇತನಶ್ರೇಣಿಯ ಮತ್ತು ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.**<br>ಅಧಿಸೂಚನೆ ಸಂಖ್ಯೆ: KSU: UGC-PS/Teaching & Non-Teaching Apmnt./2016-17 ದಿನಾಂಕ: 20.06.2018ರ ಅನ್ವಯ ಯುಜಿಸಿ ವೇತನಶ್ರೇಣಿಯ ಬೋಧಕೇತರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 12.10.2018ರಂದು ಲಿಖಿತ ಪರೀಕ್ಷೆ ಹಾಗೂ ದಿನಾಂಕ: 25.10.2018ರಂದು ಸಂದರ್ಶನವನ್ನು ನಡೆಸಲಾಯಿತು.<br>ಅಧಿಸೂಚನೆ ಸಂಖ್ಯೆ: ಕಸಂವಿ/06/ ರಾ.ಹು.ನೇ.ಅ/2018–19; ದಿನಾಂಕ: 20.06.2018ರ ಅನ್ವಯ ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 12.10.2018ರಂದು ಲಿಖಿತ ಪರೀಕ್ಷೆ ಹಾಗೂ ದಿನಾಂಕ: 25.10.2018ರಂದು ಸಂದರ್ಶನವನ್ನು ನಡೆಸಲಾಯಿತು.<br>ಆಯ್ಕೆ ಸಮಿತಿಯ ಶಿಫಾರಸ್ಸಿನ ಅನ್ವಯ ಆಯಾ ಹುದ್ದೆಗಳಿಗೆ ಆಯ್ಕೆ ಆಗಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | **ಯು.ಜಿ.ಸಿ ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆ ಸಹಾಯಕ ಗ್ರಂಥಪಾಲಕ (371ಜೆ – ಸಾಮಾನ್ಯ) ಮತ್ತು ರಾಜ್ಯ ವೇತನಶ್ರೇಣಿಯ ಸಿಸ್ಟಂ ಅನಲಿಸ್ಟ್ (371ಜೆ – ಸಾಮಾನ್ಯ) ಈ ಹುದ್ದೆಗಳಿಗೆ ದಿನಾಂಕ: 25.10.2018 ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತು. ಆಯಾ ಹುದ್ದೆಗಳಿಗೆ ಬೇಕಾಗುವ ಸೇವಾ ಅನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆಯು ಅನುಮೋದನೆಯನ್ನು ನೀಡಿತು.** |

| ಕ್ರ.ಸಂ. | ಹುದ್ದೆಯ ಪದನಾಮ | ಆಯ್ಕೆಗೊಂಡ ಅಭ್ಯರ್ಥಿಗಳು |
|---|---|---|
| **01.** | **ಸಹಾಯಕ ಗ್ರಂಥಪಾಲಕ (371ಜೆ – ಸಾಮಾನ್ಯ)** | **ಶ್ರೀಮತಿ ಕವಿತಾ ಭೀಮಪ್ಪ ಬಿರಾದಾರ್**<br>ಮನೆ ನಂ 135, ಕೆ.ಎಚ್.ಬಿ ಕಾಲೋನಿ,<br>ಉಚ್ಚನ್ಯಾಯಾಲಯದ ಎದುರು<br>ಕಲಬುರಗಿ – 585103 |
| **02.** | **ಸಿಸ್ಟಂ ಅನಲಿಸ್ಟ್ (371ಜೆ – ಸಾಮಾನ್ಯ)** | **ಮಹಾವೀರ್**<br>S/o. ಸೋಮನಾಥ<br>ಚಿಮ್ಕೋಡ್ (ಅಂಚೆ)<br>ಬೀದರ್ ತಾಲೂಕು ಮತ್ತು ಜಿಲ್ಲೆ |

**ಉಳಿದಂತೆ, ಯೋಜನಾ ಸಹಾಯಕ (ಶೈಕ್ಷಣಿಕ) – 02 (ಪ್ರವರ್ಗ 2ಬಿ)(ಪ.ಜಾ – ಹೈ.ಕ); ಕಂಪ್ಯೂಟರ್ ಪ್ರೋಗ್ರಾಮರ್–01(ಸಾಮಾನ್ಯ); ಶೀಘ್ರಲಿಪಿಕಾರರು–01(ಸಾಮಾನ್ಯ); ಡಾಟಾ ಎಂಟ್ರಿ ಆಪರೇಟರ್ –01 (ಸಾಮಾನ್ಯ – ಹೈ.ಕ), ಗ್ರಂಥಾಲಯ ಸಹಾಯಕರು –01 (ಸಾಮಾನ್ಯ – ಹೈ.ಕ), –ಈ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲ್ಲದಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಬಹುದೆಂದು ಸಭೆಯು ಸೂಚಿಸಿತು. ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು.**

ವಿಷಯ 03

**ಯು.ಜಿ.ಸಿ ವೇತನಶ್ರೇಣಿಯ ಸಹಾಯಕ ಪ್ರಾಧ್ಯಾಪಕ(ವೇದಾಂತ) ಹುದ್ದೆಯ ಸಂದರ್ಶನವನ್ನು ಮುಂದೂಡಿರುವ ಬಗ್ಗೆ**

ಯು.ಜಿ.ಸಿ ವೇತನಶ್ರೇಣಿಯ ಬೋಧಕ – ಸಹಾಯಕ ಪ್ರಾಧ್ಯಾಪಕ (ವೇದಾಂತ) ಹುದ್ದೆಗೆ ದಿನಾಂಕ: 25.10.2018ರಂದು ಸಂದರ್ಶನವನ್ನು ನಡೆಸಬೇಕಿತ್ತು. ಆದರೆ, ಆಯ್ಕೆ ಸಮಿತಿಯ ಸದಸ್ಯರು ಅನಿವಾರ್ಯ ಕಾರಣಗಳಿಂದ ಗೈರುಹಾಜರಾಗಿರುವ ಕಾರಣ, ಅಗತ್ಯ ಕೋರಂ ಇಲ್ಲದೇ ಇರುವುದರಿಂದ, ಆಯ್ಕೆ ಸಮಿತಿಯ ಅಧ್ಯಕ್ಷರಾದ ಕುಲಪತಿಗಳು ಸಂದರ್ಶನ ಪ್ರಕ್ರಿಯೆಯನ್ನು ಮುಂದೂಡಿದರು. ಸಭೆಯ ಅವಗಾಹನೆಗೆ ಮಂಡಿಸಿದೆ.

ನಿರ್ಣಯ

**ಈ ಹುದ್ದೆಯು ಬ್ಯಾಕ್‌ಲಾಗ್ ಹುದ್ದೆಯಾದ ಕಾರಣ ನಿಯಮಾನುಸಾರ ಪ್ರಕ್ರಿಯೆಯನ್ನು ತುರ್ತಾಗಿ ನಡೆಸುವಂತೆ ಸಭೆಯು ಒಪ್ಪಿಗೆ ಸೂಚಿಸಿತು. ಜೊತೆಗೆ, ಸಂದರ್ಶನಕ್ಕೆ ಅನೇಕ ವಿಷಯತಜ್ಞರನ್ನು ಆಹ್ವಾನಿಸಿದ್ದರೂ ಬಾರದ ಕಾರಣ, ಕುಲಪತಿಗಳು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಸಭೆಯು ಈಗಾಗಲೇ ಇರುವ ವಿಷಯತಜ್ಞರ ಪಟ್ಟಿಗೆ ಹೆಚ್ಚುವರಿಯಾಗಿ ಕೆಳಕಂಡವರನ್ನು ಸೇರಿಸುವಂತೆ ತಿಳಿಸಿತು. ಅದರಂತೆ, ಈ ಕೆಳಕಂಡವರನ್ನು ಹೆಚ್ಚುವರಿಯಾಗಿ ಸೇರಿಸಲಾಗಿದೆ.**

| Sl. No. | Name and Address of the Subject Experts | Category | University & State | Specialization |
|---|---|---|---|---|
| 1 | **Prof. M R Veerabhadraswamy**<br>Former Professor,<br>University of Mysore,<br>Mysore | GM | University of Mysore, Karnataka | Vedanta & All Subjects |
| 2 | **Prof. B.L. Nadoni**<br>Chairman, Department of Sanskrit<br>Karanataka University<br>Dharwad-580003 | SC | Karanataka University, Karnataka | All Subjects |
| 3 | **Prof. C. Shivaraju**<br>Chairman, Department of Sanskrit,<br>Jnanabharathi, Bangalore University,<br>Bangalore-560056 | SC | Bangalore University, Karnataka | All Subjects |
| 4 | **Dr Shripada Bhat**<br>Tilak Maharashtra Vidyapeetha<br>Vidyapeetha Bhawan<br>Gultekdi<br>Pune – 411 037 | GM | Tilak Maharashtra Vidyapeetha, Maharashtra | All Subjects |
| 5 | **Prof. M Shivakumaraswamy**<br>Former Professor<br>Bangalore University | GM | Bangalore University, Karnataka | Vedanta & All Subjects |
| 6 | **Prof. S K Senapathy**<br>Controller of Exams<br>Rashtriya Samskrit Samsthan (Deemed University)<br>56-57, Instutional Area,<br>Janakapuri,New Delhi – 110 058 | GM | Rashtriya Samskrit Samsthan, New Delhi | Vedanta & All Subjects |
| 7 | **Prof. Subray V Bhat**<br>Rashtriya Samskrit Samsthan<br>Rajiv Gandhi Campus<br>Sringeri – 577 139<br>Chikamagalur Dist, Karnataka | GM | Rashtriya Samskrit Samsthan, Karnataka | Vedanta & All Subjects |
| 8 | **Prof. Shradhhananda Pathak**<br>Former Professor<br>Lal Bahadur Shastry Samskrit University,<br>New Delhi | GM | Lal Bahadur Shastry Samskrit University, New Delhi | Vedanta & All Subjects |
| 9 | **Prof. C. Upendra Rao**<br>Professor<br>JNU, New Delhi | SC | JNU, New Delhi | All Subjects |

ವಿಷಯ 04

**ವಿಶ್ವವಿದ್ಯಾಲಯದ ವಿಚಾರ ಸಂಕಿರಣ ಇತ್ಯಾದಿಗಳಿಗೆ ಭಾಗವಹಿಸುವ ಆಹ್ವಾನಿತ ಗಣ್ಯ ವಿದ್ವಾಂಸರಿಗೆ ಗೌರವಧನ ನೀಡುವ ಬಗೆಗೆ.**

ವಿಶ್ವವಿದ್ಯಾಲಯವು ಅನೇಕ ವಿಚಾರ ಸಂಕಿರಣ, ಸಮ್ಮೇಳನ, ವಿಶೇಷ ಉಪನ್ಯಾಸ ಇತ್ಯಾದಿಗಳನ್ನು ಆಗಾಗ ಆಯೋಜಿಸುತ್ತಿದ್ದು, ಆಹ್ವಾನಿತ ಗಣ್ಯ ಅತಿಥಿಗಳಿಗೆ ಮತ್ತು ವಿದ್ವಾಂಸರಿಗೆ ಸಾಂಕೇತಿಕವಾಗಿ ಗೌರವಧನ ಪಾವತಿಸುವ ಬಗ್ಗೆ ಅನುಮೋದನೆಗೆ ಸಭೆಗೆ ಮಂಡಿಸಿದೆ

ನಿರ್ಣಯ

**ವಿಚಾರ ಸಂಕಿರಣ /ಸಮ್ಮೇಳನ / ವಿಶೇಷ ಉಪನ್ಯಾಸಗಳಿಗೆ ಆಗಮಿಸುವ ಆಹ್ವಾನಿತ ಗಣ್ಯ ವಿದ್ವಾಂಸರಿಗೆ ಸಾಂಕೇತಿಕವಾಗಿ ಗೌರವಧನ ಪಾವತಿಸಲು ಕುಲಪತಿಗಳ ವಿವೇಚನಾಧಿಕಾರಕ್ಕೆ ಬಿಡಲು ಸಭೆಯು ತೀರ್ಮಾನಿಸಿತು.**

| | |
|---|---|
| ವಿಷಯ 04 | **ವಿಶ್ವವಿದ್ಯಾಲಯವು 'ಮಹಾತ್ಮಾ ಗಾಂಧೀಜಿ ಅವರ ತಾತ್ವಿಕ ಚಿಂತನೆಗಳು' ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣವನ್ನು ಆಯೋಜಿಸಿರುವ ಬಗೆಗೆ.**<br>ವಿಶ್ವವಿದ್ಯಾಲಯವು ದಿನಾಂಕ 30.10.2018ರಂದು **'ಮಹಾತ್ಮಾ ಗಾಂಧೀಜಿ ಅವರ ತಾತ್ವಿಕ ಚಿಂತನೆಗಳು'** ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣವನ್ನು ಆಯೋಜಿಸುತ್ತಿದ್ದು, ರೂ 25,000/– ವೆಚ್ಚವನ್ನು ಅಂದಾಜಿಸಲಾಗಿದೆ. ಅನುಮೋದನೆಗೆ ಸಭೆಗೆ ಮಂಡಿಸಿದೆ |
| ನಿರ್ಣಯ | **ಸಭೆಯು ಒಪ್ಪಿಗೆ ಸೂಚಿಸಿತು.** |

**ಶ್ರೀಮತಿ ಎಂ. ಶಿಲ್ಪ,** ಕೆ.ಎ.ಎಸ್.
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್**
ಅಧ್ಯಕ್ಷರು